**ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ನಡವಳಿಗಳು**

ವಿಷಯ:- ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ 03 ಅನುದಾನಿತ ಪಾಲಿಟೆಕ್ನಿಕ್‌ಗಳ ಬೋಧಕೇತರ ಸಿಬ್ಬಂದಿಗಳಿಗೆ 2023-24 ನೇ ಸಾಲಿನ ಏಪಿಲ್ 2023 ರಿಂದ ಮೇ 2023 ರವರೆಗಿನ ಶೇ.17% ಮಧ್ಯಂತರ ಪರಿಹಾರದ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ: ಇಡಿ 55 ಟಿಜಿಎಲ್ 1964, ದಿ:29.10.1966.
2. ಸರ್ಕಾರಿ ಆದೇಶ ಸಂಖ್ಯೆ: ಇಡಿ 60 ಟಿಪಿಇ 2012, ದಿ:16.10.2012.
3. ಸರ್ಕಾರದ ಆದೇಶ ಸಂಖ್ಯೆ: ಆಇ 07 ಎಸ್‌ಆರ್‌ಪಿ 2023, ದಿನಾಂಕ:01.03.2023.
4. ಸರ್ಕಾರದ ಆದೇಶ ಸಂಖ್ಯೆ: ಆಇ 15 ಬಿಪಿಎ 2023, ದಿನಾಂಕ:20.04.2023.

ಪ್ರಸ್ತಾವನೆ:

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಡುವ ಅನುದಾನಿತ ಸಂಸ್ಥೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರನ್ನು ಅಧಿಕೃತಗೊಳಿಸಲಾಗಿದೆ.

ಉಲ್ಲೇಖ(2)ರ ಆದೇಶದಲ್ಲಿ ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಟ್ಟಿರುವ ಎಲ್ಲಾ ಅನುದಾನಿತ ಪಾಲಿಟೆಕ್ನಿಕ್ ಸಿಬ್ಬಂದಿ ವರ್ಗದವರಿಗೆ ವಾಸ್ತವಿಕವಾಗಿ ಪಾವತಿಸಬೇಕಾಗಿರುವ ವೇತನದ ಸರ್ಕಾರದ ಪಾಲಿನ ಶೇ:100% ರಷ್ಟು ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್ ಮೂಲಕ ಪಾವತಿಸುವ ಬಗ್ಗೆ ಆದೇಶವನ್ನು ನೀಡಿರುತ್ತದೆ.

ಉಲ್ಲೇಖ (3) ಮತ್ತು (4) ರಲ್ಲಿ ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರುಗಳಿಗೆ 01.04.2023 ರಿಂದ ಜಾರಿಗೆ ಬರುವಂತೆ ಮೂಲ ವೇತನದ ಶೇ.17% ಮಧ್ಯಂತರ ಪರಿಹಾರವನ್ನು ಮಂಜೂರು ಮಾಡಿ ಸರ್ಕಾರವು ಆದೇಶಿಸಿರುತ್ತಾರೆ.

ಕೇಂದ್ರ ಕಛೇರಿಯ ಹೆಚ್.ಆರ್.ಎಂ.ಎಸ್ ವಿಭಾಗದವರು ಕಡತ ಸಂ: DTE-CDC0EGU/11/2023-EGOV-DEPT TECH EDUCATION (E:1128031) ರಲ್ಲಿ 03 ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 88 ಬೋಧಕೇತರ ಸಿಬ್ಬಂದಿಗಳ ಏಪಿಲ್ 2023 ರಿಂದ ಮೇ 2023 ರವರೆಗಿನ ಶೇ.17% ಮಧ್ಯಂತರ ಪರಿಹಾರದ ಬಾಬ್ತು ರೂ.10,78,628/- ಗಳನ್ನು ಖಜಾನೆ-2 ತಂತ್ರಾಂಶದ ನಮೂನೆಯನ್ನು ಸಲ್ಲಿಸಿರುತ್ತಾರೆ. ಆದುದರಿಂದ 03 ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 88 ಬೋಧಕೇತರ ಸಿಬ್ಬಂದಿಗಳಿಗೆ ಶೇ.17% ಮಧ್ಯಂತರ ಪರಿಹಾರದ ಬಾಬ್ತು ಬಿಡುಗಡೆ ಮಾಡಬಹುದಾಗಿದೆ.

2023-24 ನೇ ಸಾಲಿಗೆ ಸರ್ಕಾರವು ಒದಗಿಸಿರುವ ಅನುದಾನದಲ್ಲಿ 03 ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು 88 ಬೋಧಕೇತರ ಸಿಬ್ಬಂದಿಗಳಿಗೆ ಏಪಿಲ್ 2023 ರಿಂದ ಮೇ 2023 ರವರೆಗಿನ ಶೇ.17% ಮಧ್ಯಂತರ ಪರಿಹಾರದ ಸರ್ಕಾರದ ಪಾಲಿನ ಶೇ.100 ರಷ್ಟು ವೇತನಾನುದಾನ ರೂ.10,78,628/- ಗಳನ್ನು 2023-24 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2203-00-104-0-01-101 ರಡಿ ಖಜಾನೆ-2 ತಂತ್ರಾಂಶದ ಮುಖಾಂತರ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿದೆ.

ಆದುದರಿಂದ, ಈ ಕೆಳಕಂಡ ಆದೇಶ,

**ಕಛೇರಿ ಆದೇಶ ಸಂ: ಡಿಟಿಇ 28 ಜಿಆರ್‌ಟಿ (2) 2022, ಬೆಂಗಳೂರು, ದಿನಾಂಕ: 01-01-2024.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 03 ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು 88 ಬೋಧಕೇತರ ಸಿಬ್ಬಂದಿಗಳಿಗೆ ಏಪಿಲ್ 2023 ರಿಂದ ಮೇ 2023 ರವರೆಗಿನ ಶೇ.17% ಮಧ್ಯಂತರ ಪರಿಹಾರದ ಸರ್ಕಾರದ ಪಾಲಿನ ಶೇ.100 ರಷ್ಟು ವೇತನಾನುದಾನ ರೂ.10,78,628/- (ರೂಪಾಯಿ ಹತ್ತು ಲಕ್ಷದ ಎಪ್ಪತ್ತೆಂಟು ಸಾವಿರದ ಆರು ನೂರು ಇಪ್ಪತ್ತೆಂಟು ಮಾತ್ರ) ಗಳನ್ನು ಖಜಾನೆ-2 ತಂತ್ರಾಂಶದ ಮೂಲಕ 2023-24 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2203-00-104-0-01-101 ರಡಿ ಬಿಡುಗಡೆ ಮಾಡಿ ಆದೇಶಿಸಿದ್ದು, ಸದರಿ ಖರ್ಚನ್ನು ಲೆಕ್ಕ ಶೀರ್ಷಿಕೆ 2203-00-104-0-01-101 ರಡಿಯಲ್ಲಿ ಭರಿಸಲುಕೂಡ ಆದೇಶಿಸಲಾಗಿದೆ.

| No. | Name of the Polytechnic | EST NO. | State Employees | Total | HRMS Bill NO. |
|---|---|---|---|---|---|
| 1 | KHK INSTITUTE OF ENGINEERING, DHARWARD | 2 | 24 | 300098 | HG2312889104 |
| 2 | MARATHA MANDAL POLYTECHNIC, BELGAUM | 18 | 53 | 642134 | HG2312892906 |
| 3 | NUTAN VIDYALA SOCIETY POLYTECHNIC, GULBARGA | 44 | 11 | 136396 | HG2312889102 |
| | **TOTAL** | | **88** | **10,78,628** | |

ಈಗ ಬಿಡುಗಡೆ ಮಾಡಿರುವ ಏಪ್ರಿಲ್ 2023 ರಿಂದ ಮೇ 2023 ರವರೆಗಿನ ಶೇ.17% ಮಧ್ಯಂತರ ಪರಿಹಾರದ ಸರ್ಕಾರದ ಪಾಲಿನ ಶೇ.100 ರಷ್ಟು ವೇತನಾನುದಾನ ರೂ.10,78,628/- (ರೂಪಾಯಿ ಹತ್ತು ಲಕ್ಷದ ಎಪ್ಪತ್ತೆಂಟು ಸಾವಿರದ ಆರು ನೂರು ಇಪ್ಪತ್ತೆಂಟು ಮಾತ್ರ) ಗಳನ್ನು ಸಿ.ಟಿ.ಎಸ್ 13 ಮೂಲಕ ಖಜಾನೆ-2 ರಲ್ಲಿ ವೆಚ್ಚ ಭರಿಸಲು ಆದೇಶಿಸಲಾಗಿದೆ.

ಷರತ್ತು ಮತ್ತು ನಿಬಂಧನೆಗಳು:-

1) ಮಾನ್ಯ ಉಚ್ಚನ್ಯಾಯಲಯ, ಧಾರವಾಡ ಬೆಂಚ್‌ನ, ಧಾರವಾಡ (1) W.P No. 110254/2019 & 110271/2019 -ಶ್ರೀ. ಕಿಶೋರ್‌ರೇವಣಕರ್ ಮತ್ತು ಇತರರು ಆದೇಶ ದಿನಾಂಕ 04-06-2019 (2) W.P ಓಂ. 110242/2019 & 110243/2019 -ಶ್ರೀ. ಸಲೀಮ್ ಅಬ್ಬಿಗೇರಿ ಮತ್ತು ಇತರರ ಆದೇಶ ದಿನಾಂಕ 18-06-2019 (3) ಮಾನ್ಯ ಉಚ್ಚನ್ಯಾಯಾಲಯ, ಬೆಂಗಳೂರು W.P No. 18442-18484/2019- ಶ್ರೀ. ನಾಗರಾಜರವ್ ವೈ.ಕೆ ಮತ್ತು ಇತರರ ಆದೇಶ ದಿನಾಂಕ 25-04-2019 ಹಾಗೂ (4) W.P No. 19104-19303/2019 & 19705-19721/2019 ಉ್ಪ ಆದೇಶ ದಿನಾಂಕ 26-04-2019 ರ ಮಧ್ಯಂತರ ಆದೇಶದನ್ವಯ ವೇತನವನ್ನು ಬಿಡುಗಡೆ ಮಾಡಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿಗೆ ಸರ್ಕಾರದಿಂದ ಅನುಮೋದಿತಗೊಂಡ ಸಿಬ್ಬಂದಿಗಳು ಬದ್ಧರಾಗಿರತಕ್ಕದ್ದು.
2) ಉಚ್ಚನ್ಯಾಯಲಯ, ಧಾರವಾಡ ಬೆಂಚ್‌ನ W.A No. 2476/2015; 2467/2015; 3600-4195/2015 c/wW.A No. 2467/2015 & 2714-3455/2015 ದಿನಾಂಕ 27-11-2015 ನ ತೀರ್ಪಿನನ್ವಯ ವೇತನವನ್ನು ಬಿಡುಗಡೆ ಮಾಡಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿಗೆ ಸರ್ಕಾರದಿಂದ ಅನುಮೋದಿತಗೊಂಡ ಸಿಬ್ಬಂದಿಗಳು ಬದ್ಧರಾಗಿರತಕ್ಕದ್ದು.
3) ಮಾನ್ಯ ಉಚ್ಚನ್ಯಾಯಾಲಯ, ಧಾರವಾಡ ಪೀಠ W.P No. 109397/2019, 109626/2019, 110116-144/2019 ರ ಆದೇಶ ದಿನಾಂಕ 15-05-2019 ರಮಧ್ಯಂತರ ಆದೇಶದನ್‌ವಯ ಟಿಪ್ಪು ಶಾಹೀದ್ ಅನುದಾನಿತ ಪಾಲಿಟೆಕ್ನಿಕ್, ಹುಬ್ಬಳ್ಳಿ ಸಂಸ್ಥೆಯ ವೇತನವನ್ನು ಬಿಡುಗಡೆ ಮಾಡಲಾಗಿದ್ದು, ನ್ಯಾಯಾಲಯದ ಅಂತಿಮ ತೀರ್ಪಿಗೆ ಸರ್ಕಾರದಿಂದ ಅನುಮೋದಿತಗೊಂಡ ಸಿಬ್ಬಂದಿಗಳು ಬದ್ಧರಾಗಿರತಕ್ಕದ್ದು.
4) ವೇತನ ಬಿಲ್ಲಿನಲ್ಲಿ ಆಯುಕ್ತರ ಅನುಮೋದನೆ ಪಡೆಯದೇ ವೇತನವಲ್ಲದೇ ಯಾವುದೇ ಮೊತ್ತವನ್ನು ಕ್ಲೇಮ್ ಮಾಡಬಾರದು, ಮಾಡಿದ್ದಲ್ಲಿ ಪ್ರಿನ್ಸಿಪಾಲರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
5) ಸರ್ಕಾರದಿಂದ ಅನುಮೋದನೆಗೊಂಡಿರುವ ಸಿಬ್ಬಂದಿಗಳಿಗೆ ಮಾತ್ರ ಸರ್ಕಾರದ ವೇತನಾನುದಾನವನ್ನು ಪಡೆಯುವುದು.
6) ಯಾವುದೇ ನೌಕರನಿಗೆ ಹೆಚ್ಚಿನ ವೇತನ ಪಾವತಿಯಾಗಿದ್ದಲ್ಲಿ ಕೂಡಲೇ ಆಯುಕ್ತರ ಗಮನಕ್ಕೆ ತರುವುದು.
7) ಯಾವೊಬ್ಬ ನೌಕರನಿಗೆ ಹೆಚ್ಚಿನ ವೇತನ ಪಾವತಿಯಾಗಿದ್ದುಕಂಡು ಬಂದಲ್ಲಿ ಅಂತಹ ನೌಕರನಿಂದ ನೀಡಲಾಗಿರುವ ಹೆಚ್ಚುವರಿ ಮೊತ್ತವನ್ನು ನೇರವಾಗಿ ವಸೂಲಿ ಮಾಡಲಾಗುವುದು.
8) ಹೆಚ್.ಆರ್.ಎಂ.ಎಸ್ ಬಿಲ್ ಅನ್ನು ಪ್ರತಿ ತಿಂಗಳು 25 ನೇ ತಾರೀಖಿನೊಳಗೆ ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿಗೆ ತಪ್ಪದೇ ಕಳುಹಿಸುವುದು, ಬಿಲ್ ತಡವಾಗಿಸಲ್ಲಿಸಿ ವೇತನ ಬಿಡುಗಡೆ ಮಾಡಲು ತಡವಾದಲ್ಲಿ ಪ್ರಿನ್ಸಿಪಾಲರನ್ನೇ ಹೊಣೆ ಮಾಡಲಾಗುವುದು.
9) ಪ್ರತಿ ತಿಂಗಳು ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಮಾಹೆಯಾನ "ಬಳಕೆ ಪ್ರಮಾಣ" ಪತ್ರವನ್ನು ಸಲ್ಲಿಸುವುದು. ಮಾಹೆಯಾನ "ಬಳಕೆ ಪ್ರಮಾಣ" ಪತ್ರವನ್ನು ಸಲ್ಲಿಸದೇಇರುವ ಸಂಸ್ಥೆಗಳ ವೇತನವನ್ನು ತಾತ್ಕಾಲಿಕವಾಗಿ ತಡೆಹಿಡಿದಲ್ಲಿ ಪ್ರಿನ್ಸಿಪಾಲರುಗಳೇ ನೇರ ಹೊಣೆಗಾರರಾಗುತ್ತಾರೆ.

10) ಪ್ರತಿ ತಿಂಗಳು ಶಾಸನ ಬದ್ಧ ಕಟಾವುಗಳನ್ನು ಮಾಡಿ ಆಯಾ/ಸಂಬಂಧಪಟ್ಟ ಇಲಾಖೆಗಳಿಗೆ ತಪ್ಪದೆ ಕಡ್ಡಾಯವಾಗಿ ಕಳುಹಿಸಿ ಈ ಕಛೇರಿಗೆ ಮಾಹಿತಿ ಸಲ್ಲಿಸತಕ್ಕದ್ದು.

11) ಪ್ರತಿ ಆರ್ಥಿಕ ವರ್ಷದಕೊನೆಯಲ್ಲಿ "Annual Accounts "ಅನ್ನು ಸಲ್ಲಿಸುವುದು.

'ಕರಡು ಪತ್ರ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ'

ಜಂಟಿ ನಿರ್ದೇಶಕರು (ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ ಸೂಕ್ತ ಕ್ರಮಕ್ಕಾಗಿ:

1) ಆಯುಕ್ತಾಲಯದ ಬಿಎಲ್ಎಸ್ (3) .
2) ಮೇಲ್ಕಂಡ ಅನುಬಂಧದಲ್ಲಿ ತಿಳಿಸಿರುವ ಪ್ರಾಚಾರ್ಯರುಗಳಿಗೆ.
3) ಆಯುಕ್ತಾಲಯದ ನಗದು ಶಾಖೆ.

ಪ್ರತಿ ಮಾಹಿತಿಗಾಗಿ:

1) ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2) ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಛೇರಿ, ಕರ್ನಾಟಕ, ಬೆಂಗಳೂರು.
3) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4) ಲೆಕ್ಕಾಧಿಕಾರಿಗಳು (ಬಿಲ್ಸ್), ತಾಂತ್ರಿಕ ಶಿಕ್ಷಣ ಆಯುಕ್ತಾಲಯ, ಬೆಂಗಳೂರು.
5) ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಆಯುಕ್ತಾಲಯ, ಬೆಂಗಳೂರು.
6) ಆಯುಕ್ತಾಲಯದ ಐಎನ್ಎಸ್(1), (2), (4) ಮತ್ತು ಆರ್ ಇಸಿ 7) ಕಛೇರಿ ಪ್ರತಿ.